**SC No. 123/2018**
**C/w 102/2019,**
**C/w 159/2022**
**P.W. 17**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 123/2018 C/w 102/2019,**
**C/w 159/2022**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **16.06.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ದಿನಾಂಕ 17.01.2017 ರಂದು ಆರೋಪಿ ನಂ. 4 ರವರು ನಮ್ಮನ್ನು ಮತ್ತು ಪಂಚರಾದ ಚಾಸಾ. 15 ಮತ್ತು 16 ರವರನ್ನು ಬಿಲವಾರದ ಬಳಿ ಇರುವ ಉಮರ್ ಬಿನ್ ಕತ್ತಾಬ್ ಟ್ರಸ್ಟ್ ನ ಶಾಲೆಯ ಬಳಿ ಕರೆದಕೊಂಡು ಹೋಗಿ ಕೃತ್ಯಕ್ಕೆ ಬಳಸಿದ ಬಿಳಿ ಬಣ್ಣದ Omni KA-04/N-4942 ವಾಹವನ್ನು ತೋರಿಸಿದ್ದು ಅದನ್ನು ಪಂಚರ ಸಮಕ್ಷಮ ಬೆಳಗ್ಗೆ 11.10 ರಿಂದ 12.15 ರವರೆಗೆ ನಿಶಾನೆ.ಪಿ. 18 ರಂತೆ ಮಹಜರ್ ಮಾಡಿರುತ್ತೇನೆ. ಸದರಿ ಸಮಯದಲ್ಲಿ Omni KA-04/N-4942 ಅನ್ನು ಜಪ್ತಿ ಮಾಡಿರುತ್ತೇನೆ. ನಿಶಾನೆ.ಪಿ. 18 ರಲ್ಲಿ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 18 (ಬಿ) ಎಂದು ಗುರುತಿಸಲಾಯಿತು. ಪಂಚರಿಗೆ ನೋಟೀಸ್ ಅನ್ನು ಜಾರಿ ಮಾಡಿದ್ದು ಅದನ್ನು ನಿಶಾನೆ.ಪಿ. 32 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 32 (ಎ) ಎಂದು ಗುರುತಿಸಲಾಯಿತು. ಜಪ್ತಿ ಮಾಡಿದ ಕಾರನ್ನು ಮಾಲುಪಟ್ಟಿ ಸಂಖ್ಯೆ 7/2017 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ಅದೇ ದಿನ ಚಾಸಾ. 15 ರಿಂದ 18 ರವರ ಹೇಳಿಕೆ ದಾಖಲು ಮಾಡಿದ್ದೇನೆ. ಅದೇ ದಿನ ಚಾಸಾ. 1 ಮತ್ತು 2 ರವರ ಮರು ಹೇಳಿಕೆ ದಾಖಲು ಮಾಡಿದ್ದೇನೆ.

2. ದಿನಾಂಕ 21.01.2017 ರಂದು ನ್ಯಾಯಾಲಯದ ಆದೇಶದಂರೆ ವಾಹನವನ್ನು ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 01.04.2017 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ಅಂತಿಮ ವರದಿ ಸಲ್ಲಿಸಿದ್ದೇನೆ. ಚಾಸಾ. 7, 8, 10, 12 ಮತ್ತು 12 ರವರು ನನ್ನ ಸಮಕ್ಷಮ ನಿಶಾನೆ.ಪಿ. 9, 10, 13, 16 ಮತ್ತು 19 ರಂತೆ ಹೇಳಿಕೆ

ನೀಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ 2, 4 ಮತ್ತು 6 ನೇ ಆರೋಪಿತರ ಪರ ಶ್ರೀ. **BMD** ವಕೀಲರಿಂದ :

1. ನಾನು Magistrate ರವರ ಮುಂದೆ ಯಾವುದೇ ವಸ್ತುಗಳನ್ನು ಗುರುತಿಸಲಿಲ್ಲ ಎಂದರೆ ಸರಿ ಅಲ್ಲ. ಆರೋಪಿತರ ಹೆಸರನ್ನು ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಪಿರ್ಯಾದಿ ಯಾವುದೇ ಆರೋಪಿಯನ್ನು ತೋರಿಸಿಲ್ಲ ಎಂದರೆ ಸರಿ ಅಲ್ಲ. ದೂರನ್ನು ನಮ್ಮ ಸಿಬ್ಬಂದಿ ಬರೆದಿದ್ದಾರೆ ಎಂದರೆ ಸರಿ ಅಲ್ಲ. ಪಂಚರ ನಮ್ಮ ಠಾಣಾ ವ್ಯಾಪ್ತಿಯವರು ಎಂದರೆ ಸರಿ ಅಲ್ಲ. ಮೊಬೈಲ್ ಅನ್ನು ಠಾಣೆಯಲ್ಲಿ ಜಪ್ತಿ ಮಾಡಿದ್ದೇವೆ ಎಂದರೆ ಸರಿ. ಮರಳು ಲಾರಿಗೆ permit ಇರಲಿಲ್ಲ ಕೇವಲ ಲಾರಿಗೆ ಮಾತ್ರ permit ಇತ್ತು. permit ಇಲ್ಲದೇ ಮರಳನ್ನು ಸಾಗಣೆ ಮಾಡಿದ್ದು ಅಕ್ರಮ ಎಂದು ನಾನು ಪರಿಶೀಲನೆ ಮಾಡಿದ್ದೇನೆ. ಈ ಬಗ್ಗೆ ಆರೋಪಿತರ, ಲಾರಿಯ ಚಾಲಕ ಮತ್ತು ಮಾಲೀಕನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ ಅಲ್ಲ. ನಾನು ಈ ಪ್ರಕರಣವನ್ನು ಸೃಷ್ಟಿಸಿದ್ದು ಎಂದರೆ ಸರಿ ಅಲ್ಲ. ನಾನು ಆ ದಿನ ಸಮವಸ್ತ್ರದಲ್ಲಿ ಇರಲಿಲ್ಲ ಎಂದರೆ ಸರಿ. ಲಾರಿಯನ್ನು ಈ ಪ್ರಕರಣಕ್ಕೆ ಸೇರಿಸಿದ್ದೇನೆ ಎಂದರೆ ಸರಿ ಅಲ್ಲ. ನಾನು ಪಂಚರಿಗೆ ನೋಟೀಸ್ ನೀಡಿಲ್ಲ ಎಂದರೆ ಸರಿ ಅಲ್ಲ.

2. ಚಾಸಾ. 9 ಮತ್ತು 10 ರವರು ಸಮವಸ್ತ್ರದಲ್ಲಿ ಇರಲಿಲ್ಲ ಎಂದರೆ ಸರಿ. ಠಾಣಾ ದಿನಚರಿಯಲ್ಲಿ ಈ ಪ್ರಕರಣಕ್ಕೆ ಸಂಬಂದ ಪಟ್ಟಂತೆ ನಮೂದು ಮಾಡಿದ್ದೇನೆ ಆದರೆ ಕಡತಕ್ಕೆ ಅಳವಡಿಸಿಕೊಂಡಿಲ್ಲ. ಚಾಸಾ. 11 ಮತ್ತು 12 ರವರು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ ಅಲ್ಲ. ನಾನು 4 ನೇ ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಮತ್ತು omni car ಅನ್ನು ಸೃಷ್ಟಿಸಿದ್ದೇನೆ ಎಂದರೆ ಸರಿ ಅಲ್ಲ. ವಾಹನ ಬಿಡುಗಡೆ ಮಾಡುವ ಕಾಲಕ್ಕೆ ನಾನು ಇರಲಿಲ್ಲ ಎಂದರೆ ಸರಿ ಅಲ್ಲ. ಆ ಲಾರಿಯನ್ನು ಸೃಷ್ಟಿಸಿರುವುದರಿಂದ ಅದನ್ನು ಬಿಡುಗಡೆ ಮಾಡಲು ಕಾಲಕ್ಕೆ ನಾನು ಇರಲಿಲ್ಲ ಎಂದರೆ ಸರಿ ಅಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನ ಎಂದರೆ ಸರಿ ಅಲ್ಲ. ದೂರು ದಾಖಲಾದ ನಂತರ ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿತರನ್ನು ತಪ್ಪಾಗಿ ಸೇರಿಸಿದ್ದೇನೆ ಎಂದರೆ ಸರಿ ಅಲ್ಲ.

3. 3 ನೇ ಆರೋಪಿ ATM Card and DL ಅನ್ನು ಸುಟ್ಟು ಹಾಕಿದ ಜಾಗವು DM Krishnappa ರವರಿಗೆ ಸೇರಿದ ಮೈದಾನವಾಗಿತ್ತು. ಆ ಸ್ವತ್ತಿನ ಸರ್ವೇ ನಂಬರ್ ನಮೂದು ಮಾಡಿಲ್ಲ. ನಾನು ಠಾಣೆಯಲ್ಲಿ ಕುಳಿತು ದಾಖಲಾತಿಗಳನ್ನು, ಹೇಳಿಕೆಗಳನ್ನು ಸಷ್ಟಿಸಿದ್ದು ಎಂದರೆ ಸರಿ ಅಲ್ಲ. ಕೃತ್ಯಕ್ಕೆ ಬಳಸಿದ ವಸ್ತುವನ್ನು ಅಮಾನತು ಪಡಿಸಿಕೊಂಡಿಲ್ಲ ಹಾಗೂ ಅದರ ಮೇಲೆ ರಕ್ತದ ಕಲೆ ಇರಲಿಲ್ಲ ಎಂದರೆ ಸರಿ. ಕತ್ತಿಯನ್ನು ಈ ಪ್ರಕರಣಕ್ಕೆ ಸೃಷ್ಟಿಸಿದ್ದು ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ 1 ನೇ ಆರೋಪಿತರ ಪರ ಶ್ರೀ. **AT** ವಕೀಲರು ಶ್ರೀ **BMD** ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

ಪಾಟೀ ಸವಾಲುಃ 3 ಮತ್ತು 5 ನೇ ಆರೋಪಿತರ ಪರ : ವಕೀಲರು ಗೈರು ಹಾಜರು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.